**ಸಾಕ್ಷಿಗೆ ದಿನಾಂಕಃ 27-02-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರವಾಗಿ ಶ್ರೀ ಎಸ್.ಕೆ ವಕೀಲರಿಂದಃ**

ನನ್ನ ಪ್ರತಿವಾದ ಪತ್ರಕ್ಕೆ ಪೂರಕವಾಗಿ ಮತ್ತು ಹೆಚ್ಚುವರಿಯಾಗಿ ನಾನು ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನನ್ನ ಪರವಾಗಿ ನಿಶಾನೆಯಾಗಿ ಗುರುತಿಸುವಂತೆ ಕೋರುತ್ತೇನೆ. ಸಾಕ್ಷಿ ಹಾಜರುಪಡಿಸಿದ ದಾಖಲೆಗಳನ್ನು ಕೆಳಗಿನಂತೆ ನಿಶಾನೆಗಳಾಗಿ ಗುರುತಿಸಲಾಯಿತು.

| | |
|---|---|
| ನಿ.ಡಿ.–10 | ಸಾಗುವಳಿ ಚೀಟಿಯ ವಿದ್ಯುನ್ಮಾನ ದೃಢಿಕೃತ ನಕಲು ಮತ್ತು ಅದಕ್ಕೆ ಲಗತ್ತಿಸಲಾದ ಜಮೀನಿನ ವಿವರ (3 ಪುಟಗಳು) |
| ನಿ.ಡಿ.–11 | ಬಗರ್ ಹುಕ್ಕುಂ ಸಾಗುವಳಿದಾರರ ಪಟ್ಟಿಯಎ ವಿದ್ಯುನ್ಮಾನ ದೃಢಿಕೃತ ನಕಲು |
| ನಿ.ಡಿ.–12 | ನಕಾಶೆಯ ವಿದ್ಯುನ್ಮಾನ ದೃಢಿಕೃತ ನಕಲು |
| ನಿ.ಡಿ.–13 | ನಮೂನೆ 35 ರಡಿ ಸಲ್ಲಿಸಲಾಗಿದ್ದ ಅರ್ಜಿಯ ವಿದ್ಯುನ್ಮಾನ ದೃಢಿಕೃತ ನಕಲು |
| ನಿ.ಡಿ.–14 | ಅಹವಾಲು ತಖ್ತೆಯ ವಿದ್ಯುನ್ಮಾನ ದೃಢಿಕೃತ ನಕಲು |

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಹಾಗೂ ನಾನು ಹಾಜರುಪಡಿಸಿದ ದಾಖಲೆಗಳನ್ನು ಪರಿಗಣಿಸಿ ಸದರಿ ದಾವೆಯನ್ನು ಖರ್ಚು ಸಹಿತ ವಜಾ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ ವಾದಿ ಮತ್ತು ವಕೀಲರು ಗೈರು ಹಾಜರಿದ್ದು ನ್ಯಾಯದ ದೃಷ್ಟಯಿಂದ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**